
# ‘ಕಾಲಕ್ಕೆ ಕನ್ನಡಿ’ ಹಿಡಿದರು



> ಪುಸ್ತಕದ ಆವಿಷ್ಕಾರವಾದದ್ದು ಮಾನವನ ಭಾಗ್ಯ. ಅದಿಲ್ಲದೆ ಗತಕಾಲ ಸಂಪೂರ್ಣವಾಗಿ ಅಳಿಸಿಹೋಗುತ್ತದೆ: ಆಗ ನಮಗೆ ಏನೂ ಉಳಿದಿರುವುದಿಲ್ಲ. ನಾವೂ ಈ ಭೂಮಿಯ ಮೇಲೆ ನಗ್ನವಾಗಿಬಿಟ್ಟಿರುತ್ತೇವೆ’ ನನಗಾದರೂ ಹಾಗೇ ಅನಿಸುತ್ತದೆ.

## ಇವರು ‘ಸತ್ಯ’ನ್

◢ ಸತ್ಯನ್ ಛಾಯಾಚಿತ್ರ ಪತ್ರಕರ್ತರಾಗಿ ಉತ್ತುಂಗದಲ್ಲಿದ್ದ ದಿನಗಳು.ಹೊಸದಿಲ್ಲಿಯಲ್ಲಿ ವಾಸ, ಪ್ರಭಾವಿ ವ್ಯಕ್ತಿಗಳ ಸಹವಾಸ. ಆ ಸಂದರ್ಭ ದಿಲ್ಲಿ ಪತ್ರಕರ್ತರ ಸಂಘದ ಗೃಹ ನಿರ್ಮಾಣ ಸಹಕಾರ ಸಂಘದ ನೇತೃತ್ವ ವಹಿಸಿದ್ದರು.ಪ್ರತಿಷ್ಠಿತ ಗುಲ್‌ಮೊಹರ್ ಪಾರ್ಕ್‌ನಲ್ಲಿ ಪತ್ರಕರ್ತರ ಕಾಲೋನಿ ತಲೆ ಎತ್ತಿತು. ಈ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದ ಸತ್ಯನ್‌ಗೆ ‘ಮೊದಲ ಹತ್ತು ಮನೆಗಳಲ್ಲಿ ನಿಮ್ಮದೂ ಒಂದಾಗಲಿ’ ಎಂದರು ಒಡನಾಡಿಗಳು. ಆದರೆ, ‘ಒಲ್ಲೆ’ ಎಂದರು ಸತ್ಯನ್. ‘ಇಲ್ಲಿರುವುದು ಸುಮ್ಮನೆ, ಮೈಸೂರಲ್ಲಿದೆ ನನ್ನ ಮನೆ ...’ಎಂಬಂತಿತ್ತು ಅವರ ಮನೋಧರ್ಮ.ಅಂತೆಯೇ ನಿವೃತ್ತಿ ನಂತರ ಮೈಸೂರಿಗೆ ಬಂದರು.

◢ ಸತ್ಯನ್ ಸಾವಿರಾರು ಛಾಯಾ ಚಿತ್ರಗಳನ್ನು ತೆಗೆದಿದ್ದಾರೆ. ಬಹುತೇಕ ಚಿತ್ರಗಳು ಪ್ರತಿಷ್ಠಿತ ಪತ್ರಿಕೆಗಳನ್ನು ಅಲಂಕರಿಸಿವೆ. ಆದರೆ, ಅವರ ಯಾವುದೇ ಚಿತ್ರವನ್ನು ಪ್ರಕಟಿಸ ಬೇಕೆಂದರೆ ಪೂರ್ವಾನುಮತಿ ಕಡ್ಡಾಯ. ಎಷ್ಟಾದರೂ ಸರಿ,ಗೌರವ ಧನ ನೀಡಲೇ ಬೇಕು. ಅನುಮತಿ ಇಲ್ಲದೆ ಪ್ರಕಟಿಸಿದರೆ ಬೆಂಕಿಯಾಗುತ್ತಿದ್ದರು. ಯಾರೇ,ಎಷ್ಟೇ ಪ್ರತಿಷ್ಠಿತರಾದರೂ ಸರಿ ತಕ್ಕ ಶಾಸ್ತಿ ಮಾಡದೆ ಬಿಡುತ್ತಿರಲಿಲ್ಲ. ಹಲವು ಪತ್ರಿಕೆಗಳ ಸಂಪಾದಕರನ್ನು ಇದೇ ಕಾರಣಕ್ಕೆ ನ್ಯಾಯಾಲಯಕ್ಕೆ ಎಳೆದ ಉದಾಹರಣೆಗಳೂ ಇವೆ.

◢ ಜರ್ಮನಿ,ಇಂಗ್ಲೆಂಡ್, ಫ್ರಾನ್ಸ್, ಅಮೆರಿಕ, ಬಾಂಗ್ಲಾ,ಶ್ರೀಲಂಕಾ,ಆಫ್ಘಾನಿಸ್ತಾನ,ಮಲೇಷ್ಯಾ ಮತ್ತಿತರ ದೇಶಗಳನ್ನು ಸುತ್ತಿ ವೃತ್ತಿಗೆ ಕಸುವು ತುಂಬಿಕೊಂಡಿದ್ದರು. ಜನ ಸಾಮಾನ್ಯರ ಬದುಕಿನ ವಿವಿಧ ಮಗ್ಗುಲುಗಳನ್ನೂ ಸತ್ಯನ್ ಚಿತ್ರಗಳು ಸಮರ್ಥವಾಗಿ ಕಟ್ಟಿಕೊಟ್ಟಿವೆ. ‘ಹಲವು ಪದಗಳು ಹೇಳುವ ಕತೆಯನ್ನು ಒಂದು ಛಾಯಾಚಿತ್ರ ಹೇಳಬಲ್ಲದು’ ಎಂಬ ಮಾತು ಸತ್ಯನ್ ಫೋಟೋಗಳಿಂದಲೇ ಸೃಷ್ಟಿಯಾಗಿದ್ದಿರಬೇಕು,ಅಷ್ಟೊಂದು ತೀಕ್ಷ್ಣ ಅವರ ಕ್ಯಾಮೆರಾ ಕಣ್ಣು.

◢ 50 -60ರ ದಶಕದಲ್ಲಿ ಅವರು ತೆಗೆದ ಚಿತ್ರಗಳು ಇತಿಹಾಸವನ್ನು ಕಣ್ಣಿಗೆ ಕಟ್ಟಿಸುವಂತವು. ಭೂದಾನ ಯಜ್ಞದ ಆಚಾರ್ಯ ವಿನೋಬಾಭಾವೆ ಅವರು ಮುಂಜಾನೆಯ ಮಬ್ಬು ಬೆಳಕಿನಲ್ಲಿ ನಡೆಸುತ್ತಿದ್ದ ಪಾದಯಾತ್ರೆ, ಚೀನಾ ಕಣ್ತಪ್ಪಿಸಿ ಭಾರತಕ್ಕೆ ಬಂದ ಟಿಬೆಟಿಯನ್ ಧರ್ಮಗುರು ದಲೈಲಾಮ, ಜೈಪುರದ ಮಹಾರಾಣಿ ಗಾಯತ್ರಿದೇವಿ ಕುದುರೆ ಸವಾರಿ, ಬ್ರಹ್ಮಪುತ್ರ ನದಿ ಪ್ರವಾಹ ಸಂತ್ರಸ್ತರ ದಾರುಣ ಸ್ಥಿತಿ,ಚೀನಾ ದಾಳಿ ಕುರಿತು ಶ್ವೇತ ಪತ್ರ ಮಂಡಿಸಲು ಸಂಸತ್ ಭವನ ಪ್ರವೇಶಿಸುತ್ತಿರುವ ಚಿಂತಾಕ್ರಾಂತ ನೆಹರೂ , ವಿಶ್ವದ ಮೊದಲ ಮಹಿಳಾ ಪ್ರಧಾನಿ ಸಿರಿಮಾವೋ ಬಂಡಾರ ನಾಯಿಕೆ ಪ್ರಮಾಣ ವಚನ, ಗೋವಾ ಗಡಿಯಲ್ಲಿನ ರಕ್ತಪಾತ ಮತ್ತಿತರ ಛಾಯಾಚಿತ್ರಗಳು ನಿಜಕ್ಕೂ ‘ಕಾಲಕ್ಕೆ ಹಿಡಿದ ಕನ್ನಡಿ’ಗಳೇ.

◢ 1973.ಬ್ರಹ್ಮಪುತ್ರ ನದಿ ತನ್ನ ಕೋಪ,ತಾಪವನ್ನು ‘ಉಕ್ಕಿ’ಸಿದ್ದರಿಂದ ಅಸ್ಸಾಂ ನಲುಗಿಹೋಗಿತ್ತು. ಅಪಾರ ಸಂಖ್ಯೆಯ ಸಾವು,ನೋವು,ಆಸ್ತಿಪಾಸ್ತಿ ನಷ್ಟ ಸಾವಿರಾರು ಮಂದಿ ಅಕ್ಷರಶಃ ಬೀದಿಪಾಲಾಗಿದ್ದರು. ಕೇಂದ್ರ ಸರಕಾರ ನೆರವಿಗೆ ಧಾವಿಸಿತಾದರೂ ಎಷ್ಟುಕೊಟ್ಟರೂ ಸಾಲದಷ್ಟು, ಅನುದಾನವನ್ನು ದುಪ್ಪಟ್ಟು ಮಾಡುವಂತೆ ಭಾರತ ಯೂನಿಸೆಫ್‌ಗೆ ಮನವಿ ಸಲ್ಲಿಸಿತು. ಅಂತೆಯೇ ಅಲ್ಲಿನ ಮಹಾ ನಿರ್ದೇಶಕ ಹೆನ್ರಿ ಲಾಬೊರಿಸ್ ಸಂತ್ರಸ್ತ ಪ್ರದೇಶಕ್ಕೆ ಪರಿಶೀಲನೆಗೆಂದು ಭೇಟಿ ನೀಡಿದರು. ಅವರ ಜತೆ ಸತ್ಯನ್ ಛಾಯಾಗ್ರಾಹಕ. ಸುತ್ತಾಟ ಮುಗಿಸಿ ದಿಲ್ಲಿಗೆ ಮರಳಿದ ಹೆನ್ರಿ ಸತ್ಯನ್ ಅವರಿಂದ ಒಂದಷ್ಟು ಫೋಟೋ ಕೇಳಿದರು. ಸತ್ಯನ್ ಕಟ್ಟಿಕೊಟ್ಟ ನೂರು ಚಿತ್ರಗಳ ಕಂತೆಯನ್ನು ಒಂದೊಂದಾಗಿ ನೋಡಿದ ಹೆನ್ರಿ ಕರಗಿ ನೀರಾದರು. ‘ನನಗೇನು ಹೇಳಬೇಕೋ ತಿಳಿಯದು. ನನ್ನ ಕೆಲಸವನ್ನು ನಿಮ್ಮ ಫೋಟೋಗಳು ಹಗುರ ಮಾಡಿವೆ. ಇವುಗಳನ್ನು ನೋಡಿದರೆ ಮಂಡಳಿ ಸದಸ್ಯರು ಖಂಡಿತಾ ಅನುದಾನ ದ್ವಿಗುಣ ಗೊಳಿಸುತ್ತಾರೆ’ ಎಂದರು. ಈ ಕೆಲಸಕ್ಕೆ ಯೂನಿಸೆಫ್ ಸತ್ಯನ್‌ಗೆ 75 ಸಾವಿರ ರೂ. ಸಂಭಾವನೆ ನೀಡಿತು. ಆ ಕಾಲಕ್ಕೆ ಅದು ಅತ್ಯಂತ ದೊಡ್ಡ ಮೊತ್ತ. ಆದರೆ ಅದನ್ನು ಸ್ವಂತಕ್ಕೆ ಬಳಸಿಕೊಳ್ಳಲು ಸತ್ಯನ್‌ಗೆ ಮನಸ್ಸಾಗಲಿಲ್ಲ.ಪ್ರಧಾನಿ ಪರಿಹಾರ ನಿಧಿಗೆ ಕಳುಹಿಸಿದರು. ಜತೆಗೊಂದು ಇಂದಿರಾ ಗಾಂಧಿಗೊಂದು ಪತ್ರ.‘ಈ ಹಣವನ್ನು ಅಸ್ಸಾಂನಲ್ಲಿ ನೊಂದ ಜನರಿಗೆ ಮಾತ್ರ ಬಳಸಬೇಕು...’!

ಹೌದು, ಸತ್ಯನ್ ಇದ್ದದ್ದೇ ಹಾಗೇ.

ಪೂರಕ ಮಾಹಿತಿ: ತಿಂಗಳು ಮಾಸಿಕ

## ಸಿ.ವಿ.ರಾಮನ್ ಅವರೊಂದಿಗೆ

ಪ್ರತಿಭಾನ್ವಿತ ಭೌತಶಾಸ್ತ್ರಜ್ಞ ಸರ್ ಚಂದ್ರಶೇಖರ್ ವೆಂಕಟರಾಮನ್ ಅವರೊಂದಿಗೆ ನನ್ನ ಮೊದಲ ಭೇಟಿಯು ಇನ್ನೂ ನನ್ನ ಮನಃಪಟಲದಲ್ಲಿ ಹಸುರಾಗಿಯೇ ಇದೆ.

ಆ ದಿನ 1948. ನೊಬೆಲ್ ಪುರಸ್ಕೃತರಾದ ಈ ಮಹನೀಯರಿಗೆ ದೂರವಾಣಿ ಮಾಡಿ ಭೇಟಿ ಮತ್ತು ಸಚಿತ್ರ ರೂಪಕಕ್ಕಾಗಿ ನಿಮ್ಮ ಸಮಯಾವಕಾಶಬೇಕೆಂದು ಕೇಳಿದೆ.

ಅಪಾರ ಕಾರ್ಯ ಗೌರವಗಳೊಂದಿಗಿರುವ ಇವರ ಭೇಟಿ ನನಗೆ ಲಭಿಸುವುದೊ ಇಲ್ಲವೊ ಎಂದು ಚಿಂತಿಸುತ್ತಿರುವಾಗಲೇ ಸಿ.ವಿ.ರಾಮನ್ ಅವರು ‘ನಿಮಗೆ ಎಷ್ಟು ಸಮಯದ ಅವಶ್ಯಕತೆ ಇದೆ’ ಎಂದು ಕೇಳಿದಾಗ ಬೆಕ್ಕಸ ಬೆರಗಾದೆ.

ಒಂದು ಗಂಟೆ, ನಾನು ಕೇಳಿಕೊಂಡೆ.

ರಾಮನ್‌ರು ‘ಅರ್ಧ ಗಂಟೆ’ ಎಂದದಲ್ಲದೆ ನಾಳೆ ಬೆಳಗ್ಗೆ೯ಕ್ಕೆ ನಿಖರವಾದ ಸಮಯಕ್ಕೆ ಬರಬೇಕೆಂದು ಎಚ್ಚರಿಕೆಯನ್ನೂ ನೀಡಿದರು.

ಡೆಕ್ಕನ್ ಹೆರಾಲ್ಡ್ ಸಂಪಾದಕರಾಗಿದ್ದ ಪೋತೆನ್ ಜೋಸೆಫ್ ಅವರಿಗೆ ನನ್ನ ಸಂದರ್ಶನದ ಕರ್ತವ್ಯವನ್ನು ವರದಿ ಮಾಡುವುದಾಗಿ ತಿಳಿಸಿದಾಗ ರಾಮನ್ ಅವರು ವೇಗಶೀಲರು, ನಿಖರತೆ ಬಯಸುವವರು. ಅವರಿಗೆ ಇರುಸುಮುರುಸಾಗದಂತೆ ನಡೆದುಕೊಂಡರೆ ಒಳ್ಳೆಯದೆಂದು ನನಗೆ ತಿಳಿಸಿದರು.

ಕ್ಯಾಮೆರಾ ಮುಂದೆ ಹೀಗೆಯೇ ಇರಬೇಕೆಂದರೆ ಅವರು ಸಿಟ್ಟಾದರು. ಜೋಪಾನ ಎಂದರು. ಈ ಮಾತು ಕೇಳಿದ ನಾನು ಮುಜುಗರ ಮತ್ತು ಭಯಭೀತನಾದೆ. ಮೊದಲ ಭೇಟಿಯ ಸಂಭ್ರಮದ ಆಸೆಗೆ ಸಂಕೋಚಗೊಂಡೆ. ಏನಾದರಾಗಲಿ ನನ್ನ ನೈತಿಕ ಸ್ಥೈರ್ಯ ತುಂಬಲು ನನ್ನೊಂದಿಗೆ ಮತ್ತೊಬ್ಬರನ್ನು ಕರೆದೊಯ್ಯಲು ನಿಶ್ಚಯಿಸಿದೆ. ಇವತ್ತಿನ ಜನಪ್ರಿಯ ನಿರ್ದೇಶಕ ಎಂ.ಎಸ್.ಸತ್ಯು ಅವರನ್ನು ಕರೆದುಕೊಂಡು ಹೋದೆ.

ಸತ್ಯು ಮತ್ತು ನಾನು ಆತ್ಮೀಯ ಸ್ನೇಹಿತರು. ಹಾಗಾಗಿ ನನ್ನೆಲ್ಲ ನಿಯೋಜಿತ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಿದ್ದ.

ನಮ್ಮ ಭಯವನ್ನು ಅರಿತ ರಾಮನ್‌ರು ಬುದ್ಧಿವಂತಿಕೆ ಮೆರೆದರು. ನಮಗೆ ಗಾಬರಿಗೊಳಿಸಲಿಲ್ಲ. ಅವರ ಓದು, ಅವರ ಪ್ರಯೋಗಾಲಯ, ಗ್ರಂಥಾಲಯ, ಪ್ರೀತಿಯ ಕೈತೋಟ ಎಲ್ಲವನ್ನೂ ಛಾಯಾಚಿತ್ರ ಮಾಡಲು ಅನುಕೂಲ ಕಲ್ಪಿಸಿಕೊಟ್ಟರು. ಇವೆಲ್ಲವನ್ನೂ 20 ನಿಮಿಷದಲ್ಲಿ ಮಾಡಿಕೊಂಡೆ. ಇನ್ನೂ 10 ನಿಮಿಷ ಬಾಕಿ. ಅದೇನೊ ನನಗೆ ಒಂದು ಹೊಳಹು. ಅದೆಂದರೆ ರಾಮನ್ ಜತೆ ಶ್ರೀಮತಿ ರಾಮನ್ ಇರಬೇಕೆಂಬುದೇ ಅದು.


ಆಕೆಯನ್ನು ಮರೆಯಿರಿ, ಅವರು ಇಲ್ಲಿಲ್ಲ ಎಂದರು. ಕೊನೆಗೆ ಮತ್ತೊಂದು ಮನಸ್ಸಿನಲ್ಲಿ ಹೊಳಹು. ಸರ್, ನೊಬೆಲ್ ಪ್ರಶಸ್ತಿಯನ್ನು ಪ್ರದರ್ಶಿಸಿದರೆ ಆ ಚಿತ್ರ ತೆಗೆಯೋಣವೆಂದೆ.

ತುಟಿ ಬಿಗಿ ಹಿಡಿದು ಯೋಚಿಸಿ-ಯಾಕಾಗಬಾರದು ಎಂದರು. ರೂಮಿನಿಂದ ಆ ಅಮೂಲ್ಯ ಪ್ರಶಸ್ತಿ ಹಿಡಿದರು.

ನಾನು ಅದೃಷ್ಟವಂತ. ನಾನು ಸತ್ಯು ಕಿವಿಯನ್ನು ಪ್ರೀತಿಯಿಂದ ಹಿಂಡಿದೆ. ನನ್ನ ಹೊಸದಾದ ಸ್ಪೀಡ್-ಗ್ರಾಫಿಕ್ ಕ್ಯಾಮೆರಾ ಬಳಸಿ ಎಲ್ಲ ಓರಣಗೊಳಿಸಿ ಚಿತ್ರ ತೆಗೆದೆ. ನಂತರ ಕಪ್ಪು ಹಲಗೆ ಬಳಿ ಬಂದ ರಾಮನ್‌ರು ಗಣಿತದ ಲೆಕ್ಕಾಚಾರವೊಂದನ್ನು ಬಿಡಿಸುತ್ತಿದ್ದಾಗ ನಾನು ತಡಮಾಡದೆ ಅದನ್ನೂ ತೆಗೆದೆ.

ಮರೆಯಲ್ಲಿ ನಿಂತಿದ್ದ ಸತ್ಯು ಕ್ಯಾಮೆರಾ ಎತ್ತಲು ಹೋಗಿ ಬೀಳಿಸಿದ. ರಾಮನ್ ಕೋಪಗೊಂಡರು. ಸತ್ಯು ಬಳಿಗೆ ಬಂದವರೆ ‘ನೀನೇನು ಮಾಡಿದೆ ಎಂದು ನಿನಗೆ ಗೊತ್ತೆ’ ಎಂದು ಏರಿದ ಧ್ವನಿಯಲ್ಲಿ ಕೇಳಿದಾಗ ಕ್ಷಮೆ ಕೇಳಲು ಸಿದ್ಧರಾಗಿದ್ದೆವು. ರಾಮನ್‌ರು ಆ ಕ್ಷಣವೇ ಸಿಟ್ಟು ಬಿಟ್ಟು ಬಿಟ್ಟಿದ್ದರು. ನಂತರ ಅವರು ಕಾಗದದ ತುಣುಕಿನ ಮೇಲೆ ಬರೆದರು. ಒಡೆದದ್ದನ್ನು ಅಂಟಿಸಿ. ಒಡೆಯಬೇಡಿ ಎಂದು. ಅಂತೂ ನೊಬೆಲ್ ಪುರಸ್ಕೃತರ ಛಾಯಾ ಭಂಗಿ ನನ್ನನ್ನು ಪುಳಕಿತಗೊಳಿಸಿತ್ತು.


ಚುರುಮುರಿ ಬ್ಲಾಗ್‌ನ ಸತ್ಯನ್‌ರ ಲೇಖನದ ಅನುವಾದ




ಸರ್ ಸಿ.ವಿ. ರಾಮನ್‌ರ ಚಿತ್ರ.



ಪ್ರಾತಃಪೂರ್ವ ಮಬ್ಬು ಬೆಳಕಿನಲ್ಲಿ ಆಚಾರ್ಯ ವಿನೋಬಾ ಭಾವೆ ಪಾದಯಾತ್ರೆ.





ಫೋಟೋ ಪೋಸ್



ಮುಂಬಯಿಯಲ್ಲಿ
ತೆಗೆದ ಚಿತ್ರ.

ಚಿತ್ರ ಕೃಪೆ: ಕಾಲಚಕ್ರ ಮತ್ತೂರ ಸಂಗ್ರಹದಿಂದ